ದಿನಾಂಕ: ಫೆಬ್ರವರಿ 27, 2014

# ಲೋಕಪಾಲ್ ನಿಯುಕ್ತಿ ವಿಧಾನ ಸೂಕ್ತವಾಗಿಲ್ಲ

-ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಲೋಕಪಾಲ್ ಹಾಗೂ ಲೋಕಾಯುಕ್ತ ಕಾಯಿದೆ 2013ನ್ನು ಪ್ರಸ್ತಾಪಿತ ದಿನಾಂಕದಿಂದ ಸುಮಾರು 46 ವರ್ಷಗಳ ನಂತರ ಅಂಗೀಕರಿಸಲಾಗಿದೆ. ಸಂಸ್ಥೆಯೊಂದನ್ನು ರಚಿಸುವುದು ಒಂದು ದೊಡ್ಡ ಸವಾಲು. ವಿಶ್ವಾಸಾರ್ಹತೆ, ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯ ಶ್ರೇಷ್ಠ ವಿಧಾನವನ್ನು ಅನುಸರಿಸಿ ಲೋಕಪಾಲ್‌ಗೆ ನಾಲ್ಕು ನ್ಯಾಯಿಕ ಸದಸ್ಯರು ಮತ್ತು ನಾಲ್ಕು ನ್ಯಾಯಾಂಗ ಏತರ ಸದಸ್ಯರನ್ನು ನೇಮಿಸಬೇಕು. ಚುನಾವಣೆಯು ಸಮೀಪಿಸಿರುವ ಕಾರಣ, ನೇಮಕಾತಿಯನ್ನು ಅತಿ ಕ್ಷಿಪ್ರವಾಗಿ ಮಾಡಹೊರಟಿರುವ ಯುಪಿಎ ಸರ್ಕಾರದ ಕ್ರಮ ವಿಷಾದನೀಯ. ಈ ಉದ್ದೇಶದಿಂದ ನೇಮಕಾತಿಗೆ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮೊಟಕುಗೊಳಿಸಿದೆ. ಇದರಿಂದಾಗಿ ಶಾಸಕಾಂಗ ನಿಬಂಧನೆಗಳು ಮತ್ತು ಶಿಷ್ಟಾಚಾರಗಳ ಉಲ್ಲಂಘನೆಯಾಗಿದೆ. ಈ ಉಲ್ಲಂಘನೆಗಳ ಕುರಿತು ವಿವರಗಳನ್ನು ನೀಡಬಯಸುತ್ತೇನೆ.

1. ಕಾಯಿದೆಯ ಪರಿಚ್ಛೇದ 4(4)ರ ಉಲ್ಲಂಘನೆ:

ಕಾಯಿದೆಯ ಪರಿಚ್ಛೇದ 4(4) ತಿಳಿಸುವಂತೆ, ಲೋಕಪಾಲ್ ಅಧ್ಯಕ್ಷರು ಮತ್ತು ಸದಸ್ಯರನ್ನು ಆಯ್ಕೆ ಮಾಡಲು ತಮ್ಮದೆ ಪಾರದರ್ಶಕ ಪದ್ಧತಿ ಜಾರಿಗೆ ತರುವಂತೆ ಆಯ್ಕೆ ಸಮಿತಿಗೆ ಸೂಚಿಸುತ್ತದೆ. ಆಯ್ಕೆ ಸಮಿತಿಯು ಕೇವಲ ಒಂದು ಬಾರಿ ಅಂದರೆ ಫೆಬ್ರವರಿ 21, 2014ರಂದು ಸಭೆ ಸೇರಿದೆ. ನನಗೆ ತಿಳಿದುಬಂದಿರುವಂತೆ ಈ ಸಭೆಯಲ್ಲಿ ಶೋಧನ ಸಮಿತಿ ಸದಸ್ಯರನ್ನು ನೇಮಿಸಲಾಗಿದೆ. ಆಯ್ಕೆ ಸಮಿತಿಯು ಆಯ್ಕೆ ವಿಧಾನವನ್ನು ರೂಪಿಸುವ ಬದಲು, ಸಿಬ್ಬಂದಿ ತರಬೇತಿ ಇಲಾಖೆಯು(ಡಿಒಪಿಟಿ) ಜನವರಿ 17, 2014ರಂದು ಅಂದರೆ ಆಯ್ಕೆ ಸಮಿತಿ ರಚಿಸಿದ ದಿನಾಂಕದಂದೆ ಜಾಹಿರಾತು ಜಾರಿಗೆ ತಂದು, ಲೋಕಪಾಲ್ ನ್ಯಾಯಿಕ ಮತ್ತು ನ್ಯಾಯಿಕವಲ್ಲದ ಸದಸ್ಯರ ನೇಮಕಾತಿಗೆ ಅರ್ಜಿ ಅಹ್ವಾನಿಸುತ್ತದೆ. ಈ ಕುರಿತು ನಾನು 2014ರ ಜನವರಿ 20 ಹಾಗೂ ಜನವರಿ 30ರಂದು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ವಿಷಯ ತಿಳಿಸಿದ್ದೆ. ಪ್ರಧಾನ ಮಂತ್ರಿಗಳಿಂದ ಎರಡು ಉತ್ತರಗಳು ದೊರೆತಿದ್ದರೂ, ನನ್ನ ಮುಖ್ಯ ಆಕ್ಷೇಪ ಕುರಿತು ಅದರಲ್ಲಿ ಸಮಾಧಾನವಿರಲಿಲ್ಲ. ಕಾಯಿದೆಯಡಿ ಡಿಒಪಿಟಿ ಪಾತ್ರವಿಲ್ಲದಿದ್ದರೂ, ತನಗೆ ಪಾತ್ರ ಕಲ್ಪಿಸಲು ನಿಯಮಗಳನ್ನು ಅದು ರೂಪಿಸಿಕೊಂಡಿದೆ. ಕಾಯ್ದೆಯಡಿ, ಅದರ ಪಾತ್ರವನ್ನು ಆಯ್ಕೆ ಸಮಿತಿ ಹಾಗೂ ಶೋಧನ ಸಮಿತಿ ನಿರ್ವಹಿಸಬೇಕು. ಪ್ರಸ್ತುತ ಪ್ರಕರಣದಲ್ಲಿ, ಜಾಹಿರಾತು ನೀಡಲು ಅಥವಾ ಅರ್ಜಿ ಅಹ್ವಾನಿಸಲು ಅಥವಾ ಅರ್ಜಿದಾರರ ಪಟ್ಟಿ ಸಿದ್ಧಪಡಿಸುವಲ್ಲಿ ಈ ಸಮಿತಿಗಳಿಗೆ ಯಾವುದೇ ಪಾತ್ರವಿಲ್ಲ. ಇಡೀ ಪಾತ್ರವನ್ನು ಡಿಒಪಿಟಿ ಕಸಿದುಕೊಂಡಿದೆ.

2. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವರೆಂಬ ಅಪೇಕ್ಷೆ:

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಅಥವಾ ಹಾಲಿ ನ್ಯಾಯಾಧೀಶರು ಹುದ್ದೆಗೆ ಅರ್ಜಿಸಲ್ಲಿಸುವ ಮಾರ್ಗವು ಅವರ ಹುದ್ದೆಯ ಘನತೆಗೆ ಯೋಗ್ಯವಾಗಿಲ್ಲವೆಂದು ನಾನು ಜನವರಿ 20,2014ರಂದು ಪ್ರಧಾನಮಂತ್ರಿಗೆ ಬರೆದ ಪತ್ರದಲ್ಲಿ ನಾನು ಸೂಚಿಸಿದ್ದೆ. ವೈಯಕ್ತಿಕ ವಿವರಗಳೊಂದಿಗೆ ಅರ್ಜಿ ಹಿಡಿದು, ತಮ್ಮನ್ನು ಲೋಕಪಾಲ್ ಹುದ್ದೆಗೆ ನೇಮಿಸಬೇಕು ಎಂದು ಸರ್ಕಾರದ ಮನ ಒಲಿಸಲು ಪ್ರಯತ್ನಿಸುವ ನ್ಯಾಯಾಧೀಶರ ಆತ್ಮಗೌರವ ಮತ್ತು ಘನತೆ ಕ್ಷೀಣಿಸುತ್ತದೆ. ಹುದ್ದೆಗೆ ಹಾತೊರೆಯುವ ನ್ಯಾಯಾಧೀಶರು ಲೋಕಪಾಲ್‌ಗೆ ನಿಯುಕ್ತರಾಗಲು ಸರ್ವಶ್ರೇಷ್ಠರೂ ಅಲ್ಲ. ಅದೇನೆಯಿರಲಿ, ಅರ್ಜಿಗಳನ್ನು ಅಹ್ವಾನಿಸಬೇಕೆ ಬೇಡವೇ ಎಂದು ನಿರ್ಧರಿಸುವ ಕೆಲಸ ಆಯ್ಕೆ ಸಮಿತಿಯದ್ದಾಗಿದೆ. ಸರ್ಕಾರ ಮುಂದಿನ ಹೆಜ್ಜೆಗೆ ಚಾಲನೆ ನೀಡಿ ಫೆಬ್ರವರಿ 7, 2014ರಂದು ಅರ್ಜಿ ಅಹ್ವಾನಿಸಿದೆ. ತಮ್ಮ ಘನತೆ ಗೌರವಕ್ಕೆ ಕುಂದು ತರುವ ಈ ಪದ್ಧತಿಯಡಿ ಅರ್ಜಿ ಸಲ್ಲಿಸಲು ಹಲವಾರು ನ್ಯಾಯಾಧೀಶರು ಮುಂದೆ ಬಂದಿಲ್ಲವೆಂಬ ಅಂಶ ನನಗೆ ತಿಳಿದುಬಂದಿದೆ. ಆದರೆ ಕೆಲವರು ತಮ್ಮ ಅರ್ಜಿಗಳನ್ನು ಮುಖ್ಯ ನ್ಯಾಯಾಧೀಶರಿಗೆ ರವಾನಿಸಿ ಅದನ್ನು ಸರ್ಕಾರಕ್ಕೆ ಕಳಿಸಬೇಕು ಎಂದು ಕೋರಿದ್ದಾರೆ. ಹಾಲಿ ನ್ಯಾಯಾಧೀಶರು ಕಾರ್ಯಸಾಧನೆ, ಅನುಭವ ಇತ್ಯಾದಿ ಮಾಹಿತಿಯೊಂದಿಗೆ ಅರ್ಜಿಯನ್ನು ಪರಿವಿಡಿ 16ರಲ್ಲಿ ನಮೂದಿಸಿ, ತಮ್ಮ ಯೋಗ್ಯತೆಯನ್ನು ಸಾಬೀತು ಪಡಿಸಬೇಕು ಎಂದೂ ಸಹ ಜಾಹಿರಾತಿನಲ್ಲಿ ತಿಳಿಸಲಾಗಿದೆ. ತಮ್ಮ ಯೋಗ್ಯತೆ ಕುರಿತು ಕೇವಲ 200 ಪದಗಳಲ್ಲಿ ತಿಳಿಸಬೇಕಂತೆ. ಈ ಪದ್ಧತಿಯನ್ನು ಸೂಚಿಸಿದವರು ಯಾರು? ಖಂಡಿತವಾಗಲೂ ಆಯ್ಕೆ ಸಮಿತಿಯಾಗಲಿ ಅಥವಾ ಶೋಧನಾ ಸಮಿತಿಯಾಗಲಿ ಇದನ್ನು ಸೂಚಿಸಿಲ್ಲ, ಇದನ್ನು ಸೂಚಿಸಿರುವುದು ಡಿಒಪಿಟಿ ಸಚಿವರು. ಕಾಯಿದೆಯಡಿ ಅವರಿಗೆ ಯಾವ ಪಾತ್ರವೂ ಇಲ್ಲ. ಆದರೂ ಸಹ ಡಿಒಪಿಟಿ ಎಲ್ಲಾ ಪಾತ್ರವನ್ನು ತನಗಾಗಿ ಕಸಿದುಕೊಂಡಿದೆ.

3. ಶೋಧನಾ ಸಮಿತಿ ಕಾರ್ಯವ್ಯಾಪ್ತಿಯನ್ನು ಡಿಒಪಿಟಿ ಕ್ಷೀಣಿಸಿದೆ:

ನಿರೂಪಿಸಲಾದ ನಿಯಮಗಳು ಕಾಯಿದೆಯ ಅಭಿಲಾಷೆಗೆ ಭಿನ್ನವಾಗಿದೆ. ನಿಯಮ 10ರ ಅನುಸಾರ, ಭಾರತ ಸರ್ಕಾರದ ಡಿಒಪಿಟಿ ಸೂಚಿಸುವ ಅರ್ಹರ ಪಟ್ಟಿಯಿಂದ ಯೋಗ್ಯವಾದವರನ್ನು ಶೋಧನಾ ಸಮಿತಿ ಆಯ್ಕೆಮಾಡಿ ಆಯ್ಕೆ ಸಮಿತಿಗೆ ನೀಡಬೇಕಾಗಿದೆ. ಅರ್ಜಿಸಲ್ಲಿಸಿದವರಲ್ಲಿ ಅರ್ಹರನ್ನು ಗುರುತಿಸಿ ಪಟ್ಟಿಮಾಡುವ ಕೆಲಸ ಡಿಒಪಿಟಿ ಮಾಡಲಿದೆ. ಆದ್ದರಿಂದ ಶೋಧನಾ ಸಮಿತಿಯ ವಿವೇಚನಾ ಶಕ್ತಿಯನ್ನು ದುರ್ಬಲಮಾಡಿದಂತಾಗಿದೆ. ಡಿಒಪಿಟಿ ಸಿದ್ದಪಡಿಸಿ ನೀಡುವ ಯೋಗ್ಯರ ಪಟ್ಟಿಯಲ್ಲಿ ಕೆಲವರ ಹೆಸರುಗಳನ್ನು ಸೂಚಿಸುವ ಗುಮಾಸ್ತರ ಕಾರ್ಯವನ್ನು ಶೋಧನಾ ಸಮಿತಿಗೆ ನೀಡಲಾಗಿದೆ.

ಮಾಧ್ಯಮ ವರದಿಗಳ ಅನುಸಾರ, ಶೋಧನಾ ಸಮಿತಿಯ ಪ್ರತಿಷ್ಠಿತ ಸದಸ್ಯರಲ್ಲಿ ಒಬ್ಬರಾದ ಶ್ರೀ ಫಾಲಿ ಎಸ್. ನರಿಮನ್ ಅವರು ಶೋಧನಾ ಸಮಿತಿಯ ಸದಸ್ಯರಾಗುವ ಗೌರವ ಸ್ವೀಕರಿಸದಂತೆ ನಿರ್ಧರಿಸಿದ್ದಾರೆ. ರಬ್ಬರ್ ಸ್ಟೇಂಪ್‌ಗಳಾಗಲು ಆತ್ಮಗೌರವ ಉಳ್ಳವರು ಒಪ್ಪಲಾರರು. ಶೋಧನಾ ಸಮಿತಿಯಲ್ಲಿ ತಮ್ಮ ಬೆಂಬಲಿಗರನ್ನೆ ಆಯ್ಕೆ ಮಾಡಲು ಸರ್ಕಾರ ನಿರ್ಧಾರಿಸಿದೆ. ಶೋಧನಾ ಸಮಿತಿಗೆ ಸೂಚಿಸಿದ ಹೆಸರುಗಳಲ್ಲಿ ಸರ್ಕಾರಿ ವಕೀಲರೂ ಸೇರಿದ್ದಾರೆ. ಆದ್ದರಿಂದ ಶೋಧನಾ ಸಮಿತಿಯಲ್ಲಿ ಕೇವಲ ಸರ್ಕಾರಿ ವಕೀಲರು ಮತ್ತು ಮಾಧ್ಯಮದಲ್ಲಿ ಕಾಂಗ್ರೆಸ್ ವಕ್ತಾರರನ್ನು ಆಯ್ಕೆ ಮಾಡಿದ ರೀತಿ ಸೂಚಿಸಲಾಗಿದೆ. ಈ ಹೆಸರುಗಳನ್ನು ಶ್ರೀಮತಿ ಸುಶ್ಮಾ ಸ್ವರಾಜ್ ಒಪ್ಪಲಿಲ್ಲ. ಯಾವುದೇ ಒಂದು ಸಂಸ್ಥೆ

ರಾಜಕೀಯ ಪಕ್ಷವೊಂದರ ಸ್ವತ್ತಲ್ಲವೆಂದು ಸರ್ಕಾರ ಅರ್ಥಮಾಡಿಕೊಳ್ಳಬೇಕು. ನ್ಯಾಯೋಚಿತ ಮತ್ತು ವಿಶ್ವಾಸಾರ್ಹ ಸಂಸ್ಥೆಗಳನ್ನು ಸೃಷ್ಟಿಸುವ ಮೂಲಕ ಸುಸಜ್ಜಿತ ವ್ಯವಸ್ಥೆ ರೂಪುಗೊಳ್ಳುತ್ತದೆ. ಶೋಧನಾ ಸಮಿತಿಯನ್ನು ಕಡೆಗಣಿಸುವುದು ಅಥವಾ ಸ್ನೇಹಿತರನ್ನು ಒಳಗೊಂಡ ಲೋಕಪಾಲ್ ಸೃಷ್ಟಿಸುವುದರಿಂದ ಸಂಸ್ಥೆಯ ಮಹತ್ವ ಕುಂದುತ್ತದೆ. ಈಗಾಗಲೇ ಯುಪಿಎ ಸರ್ಕಾರ, ಸಿಬಿಐ, ಸಿಎಜಿ, ಪಿಎಸಿ, ಜೆಪಿಸಿ ಹಾಗೂ ಸಿವಿಸಿ ಸಂಸ್ಥೆಗಳ ಮಹತ್ವವನ್ನು ತಗ್ಗಿಸುವ ಪ್ರಯತ್ನ ಮಾಡಿದೆ. ಲೋಕಪಾಲ್ ಸಂಸ್ಥೆ ಅವರ ಹಸ್ತಕ್ಷೇಪದಿಂದ ಹಾಳಾಗದೆ ಉಳಿಯಲಿ ಎಂಬ ಅಭಿಲಾಷೆ ನನ್ನದು.

✶✶✶✶✶